# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2159(2315) |
| ಸದಸ್ಯರ ಹೆಸರು | : | ಡಾ. ತಳವಾರ ಸಾಬಣ್ಣ (ನಾಮನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ | : | 27.03.2026 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಇಡೀ ವಿಶ್ವಕ್ಕೆ ಹಿಂದುಸ್ತಾನಿ ಸಂಗೀತದ ಇಂಪು ನೀಡಿದ ಹೆಮ್ಮೆಯ ಡಾ. ಗಂಗೂಬಾಯಿ ಹಾನಗಲ್ ಹುಟ್ಟಿದ ಧಾರವಾಡ ಮನೆ ಪಾಳು ಬಿದ್ದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಧಾರವಾಡದಲ್ಲಿರುವ ಪದ್ಮಭೂಷಣ ಡಾ. ಗಂಗೂಬಾಯಿ ಹಾನಗಲ್ ಅವರು ಹುಟ್ಟಿ ಬೆಳೆದ ಮನೆಯನ್ನು ವಸ್ತು ಸಂಗ್ರಹಾಲಯವನ್ನಾಗಿ ನವೀಕರಿಸಿ ಸಂಗೀತ ಆಸಕ್ತರ ಹಾಗೂ ಯುವ ಕಲಾವಿದರಿಗೆ ಸ್ಫೂರ್ತಿಯ ಕುರುಹು ಆಗಿ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ /192/ಕಸಧ/2007 ದಿನಾಂಕ:28.06.2007ರಲ್ಲಿ ರೂ.25.00ಲಕ್ಷ ಅನುದಾನವನ್ನು ಜಿಲ್ಲಾಧಿಕಾರಿ, ಧಾರವಾಡ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ. |
| ಆ) | 2007ರಲ್ಲಿ ಕರ್ನಾಟಕ ಸರ್ಕಾರ ಆ ಮನೆಯನ್ನು ಖರೀದಿ ಮಾಡಿ ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಿ, ಈಗ ಅಧಿಕಾರಿಗಳು ನಿರ್ಲಕ್ಷ್ಯ ತೋರಲು ಕಾರಣವೇನು; | ಬಿಡುಗಡೆ ಮಾಡಿರುವ ಅನುದಾನದಲ್ಲಿ ರೂ.10.00 ಲಕ್ಷಗಳನ್ನು ಡಾ. ಗಂಗೂಬಾಯಿ ಹಾನಗಲ್ ಅವರ ಮನೆಯನ್ನು ಖರೀದಿ ಮಾಡಲಾಗಿರುತ್ತದೆ. |
| ಇ) | ಮನೆ ತುಂಬೆಲ್ಲ ಜೇಡರ ಬಲೆ, ಹಾವು-ಚೇಳು, ಬೀದಿ ನಾಯಿಗಳು, ಮುರಿದು ಬಿದ್ದ ನಾಮಫಲಕ (ಬೋರ್ಡ್) ಇದೆಲ್ಲಾ ತುಂಬಿರುವ ಖ್ಯಾತ ಸಂಗೀತಗಾರ್ತಿ ಹುಟ್ಟಿದ ಮನೆಗೆ ಪುನರುಜ್ಜೀವನ ಮಾಡಲಾಗುವುದೇ; | ಡಾ. ಗಂಗೂಬಾಯಿ ಹಾನಗಲ್ ಅವರ ಮನೆಯನ್ನು ಖರೀದಿಸಿದ ನಂತರ ರೂ. 15.00 ಲಕ್ಷಗಳ ಅನುದಾನದಲ್ಲಿ ಮನೆಯನ್ನು ನವೀಕರಣಗೊಳಿಸಿ, ವಸ್ತುಸಂಗ್ರಹಾಲಯವಾಗಿ ಸಿದ್ಧಗೊಳಿಸಿ, ದಿನಾಂಕ:23.09.2008 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರು ಉದ್ಘಾಟನೆ ಮಾಡಿರುತ್ತಾರೆ. |
| ಈ) | ಈ ವಸ್ತು ಸಂಗ್ರಹಾಲಯವನ್ನು ತಕ್ಷಣವೇ ದುರಸ್ತಿಗೊಳಿಸಿ ಸಾರ್ವಜನಿಕರಿಗೆ ಮತ್ತು ಡಾ. ಗಂಗೂಬಾಯಿ ಹಾನಗಲ್ ಅಭಿಮಾನಿಗಳಿಗೆ ಅವರು ಹುಟ್ಟಿದ ಮನೆ ನೋಡಿ ಸಂತೋಷಪಡಲು ಬೇಕಾದ ಯಾವ ಕ್ರಮಗಳನ್ನು ಸರ್ಕಾರದಿಂದ ಕೈಗೊಳ್ಳಲಾಗುವುದು? | ಈ ವಸ್ತು ಸಂಗ್ರಹಾಲಯ ಹಾಗೂ ಮನೆಯ ನಿರ್ವಹಣೆಗೆ ಸಂಬಂಧಿಸಿದಂತೆ, ಜಿಲ್ಲಾಡಳಿತ ಧಾರವಾಡ ಹಾಗೂ ಶ್ರೀ ಮನೋಜ ಹಾನಗಲ್ ಮ್ಯೂಸಿಕ್ ಫೌಂಡೇಷನ್, ಹುಬ್ಬಳ್ಳಿಯವರ ಒಪ್ಪಂದದ ಮೇರೆಗೆ ದಿನಾಂಕ:05.03.2008 ರಂದು ಶ್ರೀ ಮನೋಜ ಹಾನಗಲ್ ಮ್ಯೂಸಿಕ್ ಫೌಂಡೇಷನ್, ಹುಬ್ಬಳ್ಳಿ ಇವರಿಗೆ ಹಸ್ತಾಂತರಿಸಲಾಗಿದ್ದು, ಶ್ರೀ ಮನೋಜ ಹಾನಗಲ್ ರವರು ನಿಧನರಾಗಿರುತ್ತಾರೆ. ಸದರಿ ಮನೆಯನ್ನು ಸುಸ್ಥಿತಿಯಲ್ಲಿರುವಂತೆ ನಿರ್ವಹಣೆ ಮಾಡಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿ, ಧಾರವಾಡ ಇವರಿಗೆ ದಿನಾಂಕ: 05.01.2026ರಂದು ಪತ್ರ ಬರೆಯಲಾಗಿರುತ್ತದೆ.<br><br>ಮುಂದುವರೆದು, ಮನೆ ಮತ್ತು ವಸ್ತು ಸಂಗ್ರಹಾಲಯವನ್ನು ದುರಸ್ತಿ/ನವೀಕರಣಕ್ಕೆ ಸಂಬಂಧಿಸಿದಂತೆ ಅಂದಾಜು ವೆಚ್ಚ ಪಟ್ಟಿ ಮತ್ತು ನೀಲಿ ನಕಾಶೆಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿ, ಧಾರವಾಡ ಜಿಲ್ಲೆ ಇವರಿಗೆ ದಿನಾಂಕ: 18.03.2026 ರಂದು ಪತ್ರ ಬರೆಯಲಾಗಿದ್ದು, ಪ್ರಸ್ತಾವನೆ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಲಾಗುವುದು. |

ಸಂಖ್ಯೆ: ಕಸಂವಾ 48 ಕಸನಿ 2026

(ಶಿವರಾಜ.ಎಸ್.ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು